
## ಏನಿರಬೇಕು ಲೈಂಗಿಕ ಶಿಕ್ಷಣದಲ್ಲಿ?




ಲೈಂಗಿಕ ಶಿಕ್ಷಣ ಏನೆಲ್ಲಾ ಒಳಗೊಳ್ಳಬೇಕು ಎನ್ನುವುದು ಬಹುಚರ್ಚಿತ ಮತ್ತು ಗೊಂದಲದ ವಿಷಯವಾಗಿಯೇ ಉಳಿದಿದೆ. ಭಾರತದಂತಹ ದೇಶದಲ್ಲಿ ಮಕ್ಕಳೊಂದಿಗೆ ಲೈಂಗಿಕ ವಿಷಯಗಳನ್ನು ಚರ್ಚಿಸುವುದು ಸವಾಲಿನ ಸಂಗತಿ. ಈಗಾಗಲೇ ಇರುವ ಮಾರ್ಗಸೂಚಿಗಳ ಪ್ರಕಾರ ಮಕ್ಕಳಿಗೆ 'ಸುರಕ್ಷಿತ ಸ್ಪರ್ಶ' ಮತ್ತು 'ಅಸುರಕ್ಷಿತ ಸ್ಪರ್ಶ'ದ ಬಗ್ಗೆ ಕಲಿಸುವುದು; ಆಟದ ಮೈದಾನಗಳು, ಆಟದ ಮನೆಗಳು ಮತ್ತು ಉದ್ಯಾನವನಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ, ಮಕ್ಕಳು, ಪೋಷಕರು ಮತ್ತು ಶಿಕ್ಷಕರಲ್ಲಿ ಪೋಕ್ಸೊ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸುವುದು ಇತ್ಯಾದಿ ಕ್ರಮಗಳು ಸೇರಿವೆ.

ಆದರೆ, ಲೈಂಗಿಕ ಶಿಕ್ಷಣ ಇದೆಲ್ಲರೊಂದಿಗೆ ಇದನ್ನೂ ಮೀರಿದ ಅಂಶಗಳನ್ನು ಒಳಗೊಳ್ಳಬೇಕು. ಪಠ್ಯಕ್ರಮದಲ್ಲಿ ಇದನ್ನು ಹೇಗೆ ಸೇರಿಸಬೇಕು, ಯಾವೆಲ್ಲಾ ಅಂಶಗಳನ್ನು ಒಳಪಡಿಸಬೇಕು, ಹೇಗೆ ಕಲಿಸಬೇಕು ಎನ್ನುವ ಸೂಕ್ಷ್ಮ ಸಂಗತಿಗಳನ್ನು ಚರ್ಚಿಸಬೇಕು. ಏಕೆಂದರೆ ಆಕರ್ಷಣೆ, ಬಯಕೆ, ಅಭಿವ್ಯಕ್ತಿ ಅನುಭವ ಆ ವಯಸ್ಸಿಗೆ ಸಹಜವೇ. ಅದನ್ನು ಹತ್ತಿಕ್ಕುವುದು ಅಥವಾ ತಡೆಗಟ್ಟುವುದು ನಮ್ಮ ಆದ್ಯತೆಯಲ್ಲ. ಬದಲಾಗಿ ಇಂತಹ ಭಾವಗಳನ್ನು, ಅನುಭವಗಳನ್ನು ಹೇಗೆ ನಿರ್ವಹಿಸಬೇಕು, ಯಾವೆಲ್ಲಾ ಮುನ್ನೆಚ್ಚರಿಕೆಗಳನ್ನು ಅನುಸರಿಸಬೇಕು ಎನ್ನುವ ತಿಳಿವಳಿಕೆಯನ್ನು ಕೊಡುವುದು ಮುಖ್ಯ. ಇದರ ಬೇರೆ ಬೇರೆ ಮುಖಗಳ, ಬೇರೆ ಬೇರೆ ಆಯಾಮಗಳ ಬಗ್ಗೆ ಚರ್ಚೆ ನಡೆಯಬೇಕು. ಹದಿಹರೆಯದ ಹೆಣ್ಣುಮಕ್ಕಳಿಗೆ ಮಾತ್ರವಲ್ಲ, ಶಿಶುಕಾಮಿಗಳು ಸಣ್ಣ ವಯಸ್ಸಿನ ಹೆಣ್ಣು ಹಾಗೂ ಗಂಡುಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿರುವುದರಿಂದ ಈ ಮಕ್ಕಳಿಗೂ ಲೈಂಗಿಕ ಎಚ್ಚರಿಕೆಗಳ ಬಗ್ಗೆ ತಿಳಿಹೇಳಬೇಕು.

–ಕವಿತಾ ರತ್ನ

ನಿರ್ದೇಶಕಿ, ಸಿಡಬ್ಲ್ಯೂಸಿ (The Concerned for Working Children)



### ಅತ್ಯಾಚಾರ ಮತ್ತು ಸ್ವಇಚ್ಛೆಯ ಮಿಲನ

ಇತ್ತೀಚೆಗಷ್ಟೇ ಒಂದರ ಹಿಂದೊಂದರಂತೆ ನಡೆದ, ಎದೆ ಝಲ್ಲೆನ್ನುವ ಘಟನೆಗಳಿಗೆ ಸಾಕ್ಷಿಯಾಗಿದ್ದೇವೆ. ಯಾದಗಿರಿ ತಾಲ್ಲೂಕಿನ ಶಹಾಪೂರದ ಸರ್ಕಾರಿ ವಸತಿ ಶಾಲೆಯ ಶೌಚಾಲಯದಲ್ಲಿ 9ನೇ ತರಗತಿಯ ಬಾಲಕಿ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಆಘಾತದಿಂದ ಸುಧಾರಿಸಿಕೊಳ್ಳುವ ಮೊದಲೇ ಮತ್ತೊಂದು ಹೊಡೆತಕ್ಕೆ ಬೆನ್ನುಕೊಡಬೇಕಾಯಿತು. ಶಿವಮೊಗ್ಗದ 15 ವರ್ಷದ ಬಾಲಕಿ ಸಹೋದರನಿಂದಲೇ ನಿರಂತರ ಅತ್ಯಾಚಾರಕ್ಕೆ ಒಳಗಾಗಿ ತಾಯಿಯಾಗಿದ್ದಾಳೆ!

ಇವೆರಡೂ ಘಟನೆಗಳಿಂದ ಮನಸು ಗಾಸಿಯಾಗಿರುವಾಗಲೇ ಮೈಸೂರು ದಸರಾ ವೇಳೆಯಲ್ಲಿ ಬಲೂನ್ ಮಾರಾಟಕ್ಕೆ ಬಂದಿದ್ದ 10 ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ, ಮುದ್ದೇಬಿಹಾಳ ತಾಲ್ಲೂಕಿನಲ್ಲಿಯೂ ಇಂಥದ್ದೇ ಘಟನೆ, ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ. ದಿನಕ್ಕೊಂದು, ಊರಿಗೊಂದು ಆಘಾತಕಾರಿ ಪ್ರಕರಣಗಳು ಸಿಗುತ್ತಿವೆ. ಈ ಸಂಗತಿಗಳು ಮನುಷ್ಯ ಕುಲವನ್ನೇ ಅನುಮಾನಿಸುವಂತೆ ಮಾಡುತ್ತಿವೆ.

ಮಕ್ಕಳ ಮೇಲೆ ನಡೆಯುತ್ತಿರುವ ಈ ಎಲ್ಲಾ ಲೈಂಗಿಕ ದೌರ್ಜನ್ಯಗಳನ್ನು ಗಮನಿಸಿದಾಗ ಬಹುತೇಕ ಘಟನೆಗಳಲ್ಲಿ ಮಕ್ಕಳನ್ನು ನಂಬಿಸಿ ಅಥವಾ ಪುಸಲಾಯಿಸಿ ಬಳಸಿಕೊಂಡಿರುವುದು ಗೊತ್ತಾಗುತ್ತದೆ. ಕೆಲವು ಸಲ ಮಕ್ಕಳೇ ಸ್ವ ಇಚ್ಛೆಯಿಂದ ಮಿಲನದತ್ತ ಧಾವಿಸುವ ಸಾಧ್ಯತೆಗಳೂ ಅಧಿಕ. ದಾರಿ ಯಾವುದೇ ಆಗಿದ್ದರೂ ಫಲಿತಾಂಶ ಒಂದೇ. ಲೈಂಗಿಕ ದೌರ್ಜನ್ಯ, ಲೈಂಗಿಕ ಸನ್ನೆ, ಲೈಂಗಿಕ ಭಾಷೆ, ಲೈಂಗಿಕ ಬಳಕೆಯ ಬಗ್ಗೆ ತಿಳಿವಳಿಕೆ ಇಲ್ಲದಿರುವುದು ಕಾರಣ. ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಲೈಂಗಿಕ ಶಿಕ್ಷಣ ಬೇಕು ಎನ್ನುವತ್ತ ಕೋರ್ಟ್ ಗಮನ ಸೆಳೆದಿರುವುದೂ ಇದೇ ಕಾರಣಕ್ಕೆ.

### ಪುಟ್ಟ ಮಕ್ಕಳ ಮೇಲೆ ತಾಯ್ತನದ ಹೊರೆ

ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ತಾಯ್ತನದ ಭಾರ ಹೊರುವಂತಹ ಸಂದಿಗ್ಧತೆ ಹೆಚ್ಚುತ್ತಿದೆ. 2025ರ ಜುಲೈ ವೇಳೆಗೆ ಸಾವಿರಾರು ಪ್ರಕರಣಗಳು ಬೆಳಕಿಗೆ ಬಂದಿವೆ ಎನ್ನುತ್ತದೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಪೋರ್ಟಲ್ ವರದಿ. ಈ ವೇಳೆಗೆ ದಾಖಲಾದ ಬಾಲ ಗರ್ಭಿಣಿಯರ ಒಟ್ಟು ಸಂಖ್ಯೆ 80,813. ಬೆಂಗಳೂರಿನಲ್ಲಿ 8,891,